ಡನ್ನೋನ ಸಾಹಸ ಕಥೆಗಳು

16

ನಿಕೋಲಾಯ್ ನೋಸೊವ್



ಡನ್ನೋನ ಸಂಗೀತ ಕಚೇರಿ



16

ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್

ಡನ್ನೋನ ಸಂಗೀತ ಕಚೇರಿ

ಚಿತ್ರಗಳುಃ ಬೋರಿಸ್ ಕಲೌಶಿನ್
ಕನ್ನಡಕ್ಕೆ ಪ್ರಭಾಕರ ನಾನಾವಟಿ







ಕೂಡಲೇ ಇಡೀ ಪಟ್ಟಣಕ್ಕೆ ಪ್ರವಾಸಿಗಳ ಮುಂದಾಳು, ಡನ್ನೋ, ಮತ್ತು ಅವನ ಸ್ನೇಹಿತರ ಮೇಲೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯುತ್ತಿದೆ ಎಂಬುದು ತಿಳಿಯಿತು. ಮಿನಿ ಮತ್ತು ಫ್ಲಫ್ ಮನೆಮನೆಗೆ ಓಡಾಡಿ ತಮ್ಮ ಗೆಳತಿಯರಿಗೆ ಈ ಸುದ್ದಿಯನ್ನು ತಿಳಿಸಿದರು. ಆ ಗೆಳತಿಯರು ಇತರರಿಗೆ ಹೇಳಿದರು, ಆ ಇತರರು ಇನ್ನೂ ಇತರರಿಗೆ ಹೇಳಿದರು ಮತ್ತು ಕೊನೆಗೆ ಗ್ರೀನ್‌ವಿಲ್ಲೆಯ ಎಲ್ಲಾ ನಿವಾಸಿಗಳು ಆಸ್ಪತ್ರೆಯತ್ತ ಧಾವಿಸಿದರು. ಪ್ರತಿಯೊಬ್ಬರಿಗೂ ಈ ಸಂಕಷ್ಟದಲ್ಲಿರುವ ಜನರಿಗೆ ಯಾವುದಾದರೂ ರೀತಿಯಲ್ಲಿ ಸಹಾಯ ಮಾಡಬೇಕೆಂಬ ಆಸೆಯಿತ್ತು. ಆದ್ದರಿಂದ ಅವರೆಲ್ಲರೂ ಉಡುಗೊರೆಗಳನ್ನು ತೆಗೆದುಕೊಂಡು ಬಂದರು. ಒಬ್ಬಳು ಮನೆಯಲ್ಲಿ ತಯಾರಿಸಿದ ಕೇಕ್ ತಂದಳು, ಮತ್ತೊಬ್ಬಳು ಜಾಮ್‌ನ ಬರಣಿ ತಂದಳು, ಮೂರನೆಯವಳು ಬೇಯಿಸಿದ ಹಣ್ಣುಗಳನ್ನು ತಂದಳು.

ಅರ್ಧ ಗಂಟೆಯೊಳಗೆ ಗ್ರೀನ್‌ವಿಲ್ಲೆಯ ನಿವಾಸಿಗಳಿಂದ ಆಸ್ಪತ್ರೆಯ ಲೇನ್ ಕಿಕ್ಕಿರಿದು ತುಂಬಿಹೋಯಿತು. ಸಹಜವಾಗಿಯೇ, ಇಷ್ಟು ದೊಡ್ಡ ಗುಂಪಿಗೆ ಆಸ್ಪತ್ರೆಯೊಳಗೆ ಪ್ರವೇಶ ನೀಡಲು ಸಾಧ್ಯವಾಗಲಿಲ್ಲ. ಹನಿಸಕಲ್ ವರಾಂಡಾಕ್ಕೆ ಬಂದು, ರೋಗಿಗಳಿಗೆ ಬೇಕಾಗಿರುವ ಎಲ್ಲವೂ ತಮ್ಮಲ್ಲಿದೆ ಮತ್ತು ದಯವಿಟ್ಟು ಎಲ್ಲರೂ ಮನೆಗೆ ಹೋಗಿರಿ. ಇಲ್ಲಿ ಗದ್ದಲ ಮಾಡುವುದನ್ನು ನಿಲ್ಲಿಸಿ ಎಂದು ಬಿನ್ನಯಿಸಿದಳು.

ಆದರೆ ಬಂದವರಲ್ಲಿ ಯಾರಿಗೂ ಮನೆಗೆ ತಿರುಗಿ ಹೋಗಲು ಇಷ್ಟವಿರಲಿಲ್ಲ. ಯಾವುದೋ ತಿಳಿಯದ ರೀತಿಯಲ್ಲಿ, ಪ್ರವಾಸಿಗಳ ಮುಂದಾಳು, ಡನ್ನೋ, ತನ್ನ ಸ್ನೇಹಿತರಾದ ಬ್ಲಾಬ್ಸ್ ಮತ್ತು ಟ್ರಿಲ್ಸ್‌ಗಳ ಜೊತೆ ಆಸ್ಪತ್ರೆಯಿಂದ ಹೊರ ಬೀಳುವವರಿದ್ದಾರೆ ಎಂಬ ವಿಷಯ ಅವರಿಗೆ ತಿಳಿದುಬಂದಿತ್ತು.

ಮತ್ತೊಮ್ಮೆ ಹನಿಸಕಲ್ ಮುಂಭಾಗದ ಮಂಟಪದಲ್ಲಿ ಕಾಣಿಸಿಕೊಂಡು, ಗುಂಪು ಚದುರಿಹೋಗುವವರೆಗೆ ಡನ್ನೋ ಆಸ್ಪತ್ರೆಯಿಂದ ಹೊರಬರುವುದಿಲ್ಲ ಎಂದು ಹೇಳಿದಳು. ಗುಂಪಿಗೆ ಅಲ್ಲಿಂದ ಹೋಗುವದು ಬಿಟ್ಟರೆ ಬೇರೆ ದಾರಿ ಇರಲಿಲ್ಲ. ಆದರೆ ತಮ್ಮ ತಮ್ಮ ಮನೆಗೆ ಹೋಗುವ ಬದಲು, ಹುಡುಗಿಯರು ಹಾಸ್ಪಿಟಲ್ ಲೇನ್‌ನಲ್ಲಿ ವಾಸಿಸುತ್ತಿದ್ದ ತಮ್ಮ ಸ್ನೇಹಿತರ ಮನೆಗಳಿಗೆ ಹೋದರು.

ಡನ್ನೋ, ಬ್ಲಾಬ್ಸ್ ಮತ್ತು ಟ್ರಿಲ್ಸ್ ಕಾರ್ನ್‌ಫ್ಲವರ್ ಮತ್ತು ಸ್ನೋಡ್ರಾಪ್‌ಗಳ ಜೊತೆ ಹೊರಬಂದಾಗ, ಕಿಟಕಿಗಳು ಮತ್ತು ಬಾಗಿಲುಗಳ ಹಿಂದಿನಿಂದ ಡಜನ್‌ಗಟ್ಟಲೆ ಕಣ್ಣುಗಳು ತಮ್ಮನ್ನೇ ದಿಟ್ಟಿಸುತ್ತಿರುವುದನ್ನು ಅವರು ಅನುಭವಿಸಿದರು. ಇಂತಹ ಜನಪ್ರಿಯತೆ ಡನ್ನೋಗೆ ತುಂಬಾ ಮೆಚ್ಚುಗೆಯಾಯಿತು.

"ಪ್ರಸಿದ್ಧನಾದ ಡನ್ನೋ ಯಾರು?" ಎಂದು ಯಾರೋ ಪಿಸುಗುಟ್ಟಿದರು.

"ಹಳದಿ ಪ್ಯಾಂಟ್ ಧರಿಸಿರುವವನು," ಎಂದು ಉತ್ತರ ಬಂತು.

"ಆ ಚಪ್ಪಟೆ ಕಿವಿಯವನೋ? ಅವನೇ ಡನ್ನೋ ಎಂದು ನಾನು ಎಂದಿಗೂ ಊಹಿಸಿರಲಿಲ್ಲ. ಅವನು ನೋಡಲು ಸ್ವಲ್ಪ ದಡ್ಡನಂತೆ ಕಾಣುತ್ತಾನೆ."


"ಹೌದು, ಹಾಗೇ ಕಾಣುತ್ತಾನೆ, ಅಲ್ಲವೇ? ಆದರೆ ಅವನ ಮುಖಭಾವದಲ್ಲಿ ಏನೋ ಇದೆ. ಅವನೇ ಡನ್ನೋ, ನನ್ನ ಮಾತು ನಂಬು."

ಮೂಲೆ ಮನೆಯ ಎರಡನೇ ಮಹಡಿಯ ಕಿಟಕಿಯಲ್ಲಿದ್ದ ಒಬ್ಬ ಮೈಟ್ಸಹುಡುಗಿ ಡನ್ನೋ ಕಾಣಿಸಿಕೊಂಡ ತಕ್ಷಣ ತನ್ನ ಕೈಗಳನ್ನು ಹುಚ್ಚೆದ್ದು ಬೀಸಲು ಆರಂಭಿಸಿದಳು.

"ಡನ್ನೋ! ಡನ್ನೋ!" ಎಂದು ಅವಳು ಕೂಗಿದಳು. "ಡನ್ನೋಗೆ ಜಯವಾಗಲಿ!"

ಮತ್ತು ಅವಳು ಕಿಟಕಿಯಿಂದ ಎಷ್ಟು ದೂರಕ್ಕೆ ವಾಲಿದಳೆಂದರೆ, ಬಹುತೇಕ ರಸ್ತೆಗೆ ಬಿದ್ದೇಬಿಟ್ಟಳು. ಅದೃಷ್ಟವಶಾತ್, ಅವಳ ಸ್ನೇಹಿತರು ಅವಳ ಕಾಲನ್ನು ಹಿಡಿದು ಹಿಂದಕ್ಕೆ ಎಳೆದರು.

"ನಾಚಿಕೆಯಾಗಬೇಕು ನಿನಗೆ!" ಎಂದು ಚೂಪಾದ ಮುಖ ಮತ್ತು ಮೊನಚಾದ ಗಲ್ಲವಿದ್ದ ಒಬ್ಬ ಮೈಟ್ಸ ಹುಡುಗಿ ಹೇಳಿದಳು. "ನೀನು ಆ ಡನ್ನೋ ತಾನೇ ಎಲ್ಲರಿಗಿಂತ ದೊಡ್ಡವನು ಎಂದುಕೊಳ್ಳುವಂತೆ ಮಾಡಿಬಿಡುತ್ತೀಯಲ್ಲ."



“ಸರಿ ಮಾತು, ಬರ್ಡಿ,” ಎಂದು ಅವಳ ಸ್ನೇಹಿತೆ ಒಪ್ಪಿಕೊಂಡಳು; ಅವಳ ಮೇಲಿನ ತುಟಿ ಚಿಕ್ಕದಾಗಿದ್ದು, ಬಿಳಿ ಹಲ್ಲುಗಳು ಮಿಂಚುತ್ತಿದ್ದವು. “ ನೀವು ಮೈಟ್ಸಹುಡುಗರ ಬಗ್ಗೆ ಗಮನ ಹರಿಸುತ್ತಿದ್ದೀರಿ ಎಂದು ಎಂದಿಗೂ ಅವರಿಗೆ ತಿಳಿಯಲು ಬಿಡಬಾರದು. ಅವರ ಕಿಡಿಗೇಡಿತನಕ್ಕೆ ಯಾರೂ ಗಮನ ಕೊಡುತ್ತಿಲ್ಲವೆಂದು ಅವರಿಗೆ ತಿಳಿದರೆ, ಅವರು ಅವುಗಳನ್ನು ಮಾಡುವುದನ್ನು ನಿಲ್ಲಿಸುತ್ತಾರೆ.”

“ನಾನು ಅದನ್ನೇ ಹೇಳುತ್ತಿದ್ದೇ ಕಿಟ್ಟಿ,” ಎಂದು ಬರ್ಡಿ ಒಪ್ಪಿಕೊಂಡಳು. “ಹುಡುಗರನ್ನು ಕೀಳಾಗಿ ನೋಡಬೇಕು. ನೀವು ಅವರನ್ನು ಕೀಳಾಗಿ ನೋಡುತ್ತೀರಿ ಎಂದು ಒಮ್ಮೆ ಅವರಿಗೆ ತಿಳಿದರೆ, ಅವರು ನಿಮಗೆ ನೋವುಂಟುಮಾಡಲು ಹೆದರುತ್ತಾರೆ.”

ಮತ್ತು ಬರ್ಡಿ ಹಾಗೂ ಕಿಟ್ಟಿ, ಹೊಸದಾಗಿ ಬಂದಿದ್ದ ಹುಡುಗರನ್ನು ಕೀಳಾಗಿ ನೋಡಬೇಕು ಎಂದು ಪ್ರತಿಯೊಬ್ಬರ ಕಿವಿಯಲ್ಲೂ ಪಿಸುಗುಟ್ಟಲು ಆರಂಭಿಸಿದರು. ಅವರ ಬಗ್ಗೆ ಸ್ವಲ್ಪವೂ ಗಮನ ಹರಿಸಬಾರದೆಂದು ಎಲ್ಲಾ ಹುಡುಗಿಯರನ್ನೂ ಒಪ್ಪಿಸಿದರು, ಮತ್ತು ಒಬ್ಬ ಹುಡುಗ ಬರುತ್ತಿರುವುದನ್ನು ಕಂಡರೆ ರಸ್ತೆಯ ಇನ್ನೊಂದು ಬದಿಗೆ ದಾಟಿಹೋಗುವಂತೆ ಹೇಳಿದರು..“



ಆದರೆ ಈ ಮಾತುಕತೆಗಳಲ್ಲಿ ಎಳ್ಳಷ್ಟು ಹುರುಳಿರಲಿಲ್ಲ. ಬ್ಲಾಬ್ಸ್ ಒಬ್ಬ ಕಲಾವಿದ ಮತ್ತು ಟ್ರಿಲ್ಸ್ ಸುಂದರವಾಗಿ ಕೊಳಲನ್ನು ನುಡಿಸುವ ಒಬ್ಬ ಸಂಗೀತಗಾರ ಎಂಬುದು ಅವರಿಗೆಲ್ಲರಿಗೂ ತಿಳಿದಿತ್ತು. ಅವನು ನುಡಿಸುವುದನ್ನು ಕೇಳಲು ಎಲ್ಲರೂ ಕಾತರರಾಗಿದ್ದರು, ಏಕೆಂದರೆ ಗ್ರೀನ್‌ವಿಲ್ಲಿನಲ್ಲಿ ನುಡಿಸಲಾಗುತ್ತಿದ್ದ ಏಕೈಕ ವಾದ್ಯ ಹಾರ್ಪ್ ಆಗಿತ್ತು ಮತ್ತು ಯಾರೂ ಇದುವರೆಗೆ ಕೊಳಲನ್ನು ಕೇಳಿರಲಿಲ್ಲ. ಎಷ್ಟೋ ಹುಡುಗಿಯರಿಗೆ ಅಂಥ ಒಂದು ವಾದ್ಯವಿದೆ ಎಂಬುದೇ ಗೊತ್ತಿರಲಿಲ್ಲ.

ಸ್ವಲ್ಪ ಸಮಯದ ನಂತರ ಬ್ಲಾಬ್ಸ್ ಮತ್ತು ಟ್ರಿಲ್ಸ್ ಆಪಲ್ ಸ್ಕ್ವೇರ್‌ನಲ್ಲಿರುವ ಬಟನ್‌ನ ಮನೆಗೆ ಸ್ಥಳಾಂತರಗೊಂಡಿದ್ದಾರೆ ಎಂಬುದು ಅವರಿಗೆ ತಿಳಿಯಿತು. ಈ ಮನೆಯ ಎರಡನೇ ಮಹಡಿಯಲ್ಲಿ ಒಂದು ದೊಡ್ಡ ಕೋಣೆಯಿತ್ತು; ಅದರ ಒಂದು ಕಿಟಕಿಯು ಇಡೀ ಗೋಡೆಯನ್ನೇ ಆವರಿಸಿತ್ತು. ಆ ಕೋಣೆ ಎಷ್ಟು ಬೆಳಕು ತುಂಬಿದ ಮತ್ತು ಗಾಳಿಯಾಡುವಂತಿತ್ತೆಂದರೆ ಬ್ಲಾಬ್ಸ್ ತಕ್ಷಣವೇ ಅದಕ್ಕೆ ಮನಸೋತನು. ಅವನು ಮತ್ತು ಟ್ರಿಲ್ಸ್ ಅಲ್ಲಿ ಇರಲು ನಿರ್ಧರಿಸಿದರು.

ಅವರ ಕೋಣೆಯ ಕಿಟಕಿಯಿಂದ ಆಪಲ್ ಸ್ಕ್ವೇರ್ ಕಾಣಿಸುತ್ತಿತ್ತು. ಸಂಜೆ ಹೊತ್ತಿನಲ್ಲಿ ವೇಳೆ ಕಳೆಯಲು ಆಪಲ್ ಸ್ಕ್ವೇರ್ ಎಂದಿಗೂ ಜನಪ್ರಿಯ ಸ್ಥಳವಾಗಿರಲಿಲ್ಲ. ಆದರೆ ಆ ಸಂಜೆ ಗ್ರೀನ್‌ವಿಲ್ಲಿನ ಪ್ರತಿಯೊಬ್ಬರೂ ಅಲ್ಲಿ ವಿಹರಿಸ ತೊಡಗಿದರು.





ಮೈಟ್ಸ ಹುಡುಗಿಯರು ಜೋಡಿಯಾಗಿ, ಕೈ ಕೈ ಹಿಡಿದುಕೊಂಡು, ಮೇಲೆ ಕೆಳಗೆ ನಡೆಯುತ್ತಾ, ಎರಡನೇ ಮಹಡಿಯ ಕಿಟಕಿಯತ್ತ ಕಳ್ಳನೋಟಗಳನ್ನು ಬೀರುತ್ತಿದ್ದರು. ಖಂಡಿತವಾಗಿಯೂ, ಅವರು ಬ್ಲಾಬ್ಸ್ ಮತ್ತು ಟ್ರಿಲ್ಸ್‌ರನ್ನು ನೋಡಬೇಕೆಂಬ ಆಸೆಯಿಂದ ಹೀಗೆ ಮಾಡುತ್ತಿರಲಿಲ್ಲ. ಅವರು ಸಂಗೀತವನ್ನು ಕೇಳಲು ಆತುರದಿಂದ ಕಾಯುತ್ತಿದ್ದರು.

ಕಾಲಕಾಲಕ್ಕೆ, ಟ್ರಿಲ್ಸ್ ತನ್ನ ಕೂದಲನ್ನು ಎಷ್ಟು ಅಚ್ಚುಕಟ್ಟಾಗಿ ಹಿಂದಕ್ಕೆ ಸವರಿಕೊಂಡಿದ್ದಾನೋ, ಅಥವಾ ಬ್ಲಾಬ್ಸ್‌ನ ಕೂದಲು ಎಲ್ಲ ದಿಕ್ಕುಗಳಲ್ಲೂ ಚಾಚಿಕೊಂಡಿದ್ದಾನೋ ಎಂಬ ನೋಟ ಅವರಿಗೆ ಸಿಗುತ್ತಿತ್ತು. ಒಮ್ಮೆ ಅವರು ಬ್ಲಾಬ್ಸ್ ಬಂದು ಕಿಟಕಿಯ ಅಂಚಿಗೆ ಒರಗಿ, ಕನಸುಗಣ್ಣಿನಿಂದ ದೂರದ ಶೂನ್ಯವನ್ನು ನೋಡುತ್ತ ನಿಂತಿರುವುದನ್ನು ಕಂಡರು.



ಕೆಲ ಹೊತ್ತಿನ ಮೇಲೆ ಬ್ಲಾಬ್ಸ ಜೊತೆ ಟ್ರೆಲ್ಸ್ ಕಿಟಕಿಯಲ್ಲಿ ಬಂದು ನಿಂತನು. ಅವರಿಬ್ಬರೂ ಉಗ್ರವಾದ ಚರ್ಚೆಯಲ್ಲಿ ತೊಡಗಿದ ಹಾಗೆ ಕಾಣಿಸುತ್ತಿತ್ತು. ಅವನು ತನ್ನ ತಲೆಯನ್ನು ಅತ್ತಿತ್ತ ತಿರುಗಿಸುತ್ತಾ, ಕೈಗಳನ್ನು ಬೀಸುತ್ತಾ ಮಾತನಾಡುತ್ತಿದ್ದನು. ನಂತರ ಅವರಿಬ್ಬರೂ ಅಲ್ಲಿಂದ ಹೊರಟುಹೋದರು. ಆ ರಾತ್ರಿ ಇನ್ನು ಏನೂ ನಡೆಯುವುದಿಲ್ಲವೆಂದು ಅವರಿಗೆ ತೋರಿತು, ಆದರೆ ಯಾರೂ ಮನೆಗೆ ಹೋಗಲಿಲ್ಲ. ಅವರು ಹೋಗದೆ ಇದ್ದದ್ದೇ ಒಳ್ಳೆಯದೇ ಆಯಿತು, ಏಕೆಂದರೆ ಸ್ವಲ್ಪ ಸಮಯದ ಬಳಿಕ, ಸಮುದ್ರದ ತೊರೆಯ ಕಲಕಲದಷ್ಟು ಮೃದುವಾದ ಕೊಳಲಿನ ಸ್ವರಗಳು ಎರಡನೇ ಮಹಡಿಯ ಕಿಟಕಿಯಿಂದ ಕೇಳಿಬಂದವು. ಈಗ ಅವು ಒಂದರ ಹಿಂದೆ ಒಂದರಂತೆ ಅಲೆ ಅಲೆಯನ್ನು ಹಿಂಬಾಲಿಸುವಂತೆ ಮೇಲೇಳುತ್ತಿದ್ದವು. ಈಗ ಅವು ಗಾಳಿಯಲ್ಲಿ ಒಂದನ್ನೊಂದು ಉರುಳಿಸುತ್ತಾ, ಬೆನ್ನಟ್ಟುತ್ತಾ ಮೇಲಕ್ಕೆ ಜಿಗಿಯುತ್ತಿದ್ದವು.

.



ಅದು ಬಹಳ ಇಂಪಾದ ಉತ್ಸಾಹಭರಿತ ಸಂಗೀತವಾಗಿತ್ತು. ಅದು ಎಲ್ಲರಲ್ಲಿ ಸಂತೋಷದ ಮನೋಭಾವಕ್ಕೆ ತಂದುಹಾಕಿತು. ಕೊಳಲಿನ ಸ್ವರಗಳು ಅವರ ಕೈಕಾಲುಗಳನ್ನು ಎಳೆಯುತ್ತಿರುವಂತೆ ಭಾಸವಾಗುತ್ತಿದ್ದವು, ನೃತ್ಯ ಮಾಡಲು ಅವರನ್ನು ಪ್ರೇರೇಪಿಸುತ್ತಿದ್ದವು.

ಒಂದರ ನಂತರ ಒಂದರಂತೆ ಮನೆಗಳ ಕಿಟಕಿಗಳು ಮೆಲ್ಲಗೆ ತೆರೆಯಲ್ಪಟ್ಟವು. ಚೌಕದಲ್ಲಿದ್ದ ಎಲ್ಲಾ ಚಲನವಲನ ನಿಂತುಹೋಯಿತು. ಸಂಗೀತದ ಒಂದೇ ಒಂದು ಸ್ವರವನ್ನೂ ತಪ್ಪಿಸಿಕೊಳ್ಳಬಾರದೆಂದು ಎಲ್ಲರೂ ನಿಶ್ಚಲವಾಗಿ ನಿಂತರು. ಕೊನೆಗೆ ಕೊಳಲು ಮೌನವಾಯಿತು, ಆದರೆ ಚೌಕದ ಇನ್ನೊಂದು ಬದಿಯಲ್ಲಿದ್ದ ಮನೆಯ ಕಿಟಕಿಯಿಂದ ಹಾರ್ಪ್‌ದ ಸ್ವರ ಕೇಳ ಬಂತು. ಅದು ಕೊಳಲು ನುಡಿಸಿದ ರಾಗವನ್ನು ಪ್ರತಿಧ್ವನಿಸುತ್ತಿರುವಂತೆ ಭಾಸವಾಯಿತು.







ಯಾರೋ ಒಬ್ಬರ ಬೆರಳುಗಳು ತಂತಿಗಳ ಮೇಲೆ ಹಿಂಜರಿಕೆಯಿಂದ ಅದನ್ನು ನುಡಿಸುತ್ತಿದ್ದವು. ಸ್ವಲ್ಪ ಸ್ವಲ್ಪವಾಗಿ ಆ ಮಧುರವಾದ ರಾಗವು ಕ್ಷೀಣಿಸುತ್ತಾ ಹೋಯಿತು, ಮತ್ತು ಅದು ಮುಗಿಯುವಷ್ಟರಲ್ಲಿ ಕೊಳಲು ಅದನ್ನೇ ಮತ್ತೆ ಹಿಡಿದುಕೊಂಡಿತು. ಇದರಿಂದ ಹಾರ್ಪ ಮತ್ತೆ ನುಡಿಸುವುದನ್ನು ಮುಂದುವರಿಸಲು ಉತ್ತೇಜನ ದೊರೆಯಿತು. ಸ್ವಲ್ಪ ಹೊತ್ತಿನಲ್ಲೇ ಎರಡನೆಯ ಹಾರ್ಪ ಸೇರಿಕೊಂಡಿತು, ನಂತರ ಮೂರನೆಯದು ಸೇರಿಕೊಂಡಿತು, ಮತ್ತು ರಾಗವು ಎಂದಿಗಿಂತಲೂ ಹೆಚ್ಚು ಇಂಪಾಗಿ ಉಲ್ಲಾಸಭರಿತವೂ ಆಯಿತು.
ಅಷ್ಟರಲ್ಲಿ ಡನ್ನೋ ಬ್ಲಾಬ್ಸ್‌ಗಾಗಿ ಕೆಲವು ಬಣ್ಣಗಳನ್ನು ಮತ್ತು ಕುಂಚಗಳನ್ನು ತರುತ್ತಾ ಓಡಿಬಂದನು. ಸಂಗೀತವನ್ನು ಉಸಿರು ಬಿಗಿಹಿಡಿದು ಕೇಳುತ್ತಿದ್ದ ಈ ಎಲ್ಲ ಹುಡುಗಿಯರನ್ನು ಕಂಡು ಅವನು ಬಹಳ ಆಶ್ಚರ್ಯಚಕಿತನಾದನು. ಅವನೂ ಕೂಡ ಕೇಳಲು ನಿಂತನು, ಮತ್ತು ತನ್ನತ್ತ ಗಮನ ಸೆಳೆಯುವ ಆಶಯದಿಂದ ಒಂದು   ಎರಡು ಸಲ ಕುಣಿದಾಡಿದನು ಕೂಡ. ಆದರೆ ಯಾರೂ ಅವನತ್ತ ಗಮನ ಕೊಡಲಿಲ್ಲ. ಆದ್ದರಿಂದ ಅವನು ಬಟನ್‌ನ ಮನೆಯ ಬಾಗಿಲಿನಿಂದ ಒಳಗೆ ಹೊರಟು ಹೋದನು.





